**ದೇವಾಲಯಗಳಿಗೆ ಅನುದಾನ**

130 (174) ಶ್ರೀ ಯು.ಆರ್. ಸಭಾಪತಿ (ಉಡುಪಿ):- ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) 1997-98ನೇ ಸಾಲಿನಲ್ಲಿ ದೇವಾಲಯಗಳ ಜೀರ್ಣೋದ್ಧಾರಕ್ಕಾಗಿ ಎಷ್ಟು ಹಣ ನಿಗದಿಪಡಿಸಲಾಗಿದೆ; ಇದರಲ್ಲಿ ಆರಾಧನಾ ಯೋಜನೆಗೆ ಎಷ್ಟು; ನಿಗದಿಪಡಿಸಲಾಗಿದೆ.

ಆ) ಈ ಅನುದಾನವನ್ನು ಮಾರ್ಚ್ 31ರ ಒಳಗೆ ಎಲ್ಲಾ ದೇವಸ್ಥಾನಗಳಿಗೆ ಬಿಡುಗಡೆ ಗೊಳಿಸಲಾಗುವುದೇ; ಸರ್ಕಾರದಿಂದ ಸಿಗುವ ಹಣ ಸಕಾಲಕ್ಕೆ ಸಿಗದೆ ಮತ್ತು ಬಹಳಷ್ಟು ದೇವಸ್ಥಾನಗಳ ದುರಸ್ಥಿ ಕಾರ್ಯ ಅರ್ಧದಲ್ಲಿ ನಿಂತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು)

ಅ) 1997-98ನೇ ಸಾಲಿನಲ್ಲಿ ಜೀರ್ಣೋದ್ಧಾರ, ನಿರ್ಮಾಣ ಮತ್ತು ಆರಾಧನಾ ಯೋಜನೆಗೆ ಈ ಕೆಳಕಂಡಂತೆ ಹಣ ನಿಗದಿಪಡಿಸಲಾಗಿದೆ.

| ವರ್ಷ | ಜೀರ್ಣೋದ್ಧಾರ | ನಿರ್ಮಾಣ | ಆರಾಧನಾ |
|---|---|---|---|
| 1997-98 | 1.42 ಕೋಟಿ | 1.05 ಕೋಟಿ | 5.00 ಕೋಟಿ |

ಆ) ಶೀಘ್ರದಲ್ಲಿ ಬಿಡುಗಡೆ ಮಾಡಲಾಗುವುದು.

**ಬೆಂಗಳೂರು ಮಲ್ಲೇಶ್ವರಂನ 15ನೇ ಕ್ರಾಸ್‌ನ ಕಾಡು ಮಲ್ಲೇಶ್ವರ ದೇವಸ್ಥಾನಕ್ಕೆ ಸೇರಿದ ಅಂಗರಗಳು**

131(177) ಶ್ರೀ ಯು. ಆರ್. ಸಭಾಪತಿ (ಉಡುಪಿ):- ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮಲ್ಲೇಶ್ವರಂನ 5ನೇ ಕ್ರಾಸ್‌ನ ಕಾಡು ಮಲ್ಲೇಶ್ವರ ದೇವಸ್ಥಾನಕ್ಕೆ ಸೇರಿದ ಜಾಗದಲ್ಲಿ 1997-98ನೇ ಸಾಲಿನಲ್ಲಿ ಎಷ್ಟು ಅಂಗಡಿಗಳನ್ನು ಕಟ್ಟಲಾಗಿದೆ;

ಆ) ಈ ಅಂಗಡಿಗಳನ್ನು ಗುತ್ತಿಗೆಗೆ ಅಥವಾ ಬಾಡಿಗೆಗೆ ನೀಡಲಾಗಿದೆಯೇ; ನೀಡಲಾಗಿದ್ದಲ್ಲಿ ಅನುಸರಿಸಿದ ನಿಯಮಗಳೇನು; ಹಾಗೂ ಬಂದಿರುವ ಬಾಡಿಗೆ ಹಣ ಎಷ್ಟು;

ಇ) ದಿನಪತ್ರಿಕೆಯಲ್ಲಿ ಜಾಹಿರಾತು ಕೊಟ್ಟಿದ್ದಲ್ಲಿ; ಇದಕ್ಕಿಂತ ಜಾಸ್ತಿ ಬಾಡಿಗೆ ಸಿಗುತ್ತಿರಲಿಲ್ಲವೇ;

ಈ) ಇಷ್ಟು ಕಡಿಮೆ ಬಾಡಿಗೆಗೆ ಕೊಡಲು ಕಾರಣಗಳೇನು; ವಿವರ ನೀಡುವುದು?

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು)

ಅ) ಬೆಂಗಳೂರು ಮಲ್ಲೇಶ್ವರಂನ 15ನೇ ಕ್ರಾಸ್‌ನ ಕಾಡುಮಲ್ಲೇಶ್ವರ ದೇವಾಲಯಕ್ಕೆ ಸೇರಿದ ಜಾಗದಲ್ಲಿ 1997-98ನೇ ಸಾಲಿನಲ್ಲಿನ 4 ಅಂಗಡಿಗಳನ್ನು ದಾನಿಗಳಿಂದ ಕಟ್ಟಲಾಗಿದೆ.

ಆ) ಈ ಅಂಗಡಿಗಳ ನಿರ್ಮಾಣ ಕಾರ್ಯ ಪೂರ್ಣವಾಗುತ್ತಿದ್ದು, ಇನ್ನು ಗುತ್ತಿಗೆಗೆಯನ್ನು ನೀಡಬೇಕಾಗಿದೆ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ

ಈ) ಪ್ರಶ್ನೆ ಉದ್ಭವಿಸುವುದಿಲ್ಲ

**ಗೃಹ ಮಂಡಳಿಯ ವಸತಿ ಗೃಹಗಳು**

133 (197) ಶ್ರೀ ಜಿ.ವಿ. ರಾಮರೆಡ್ಡಿ (ಬಾಗೇಪಲ್ಲಿ):- ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 3 ವರ್ಷಗಳಿಂದ ವಸತಿ ಹಂಚಿಕೆಗಾಗಿ ಮಂಡಳಿಗೆ ಬಂದ ಅರ್ಜಿಗಳೆಷ್ಟು; (ವರ್ಷಾವಾರು ವಿವರ ನೀಡುವುದು)

ಆ) ಬಂದ ಅರ್ಜಿಗಳ ಎಷ್ಟು ಅರ್ಜಿದಾರರಿಗೆ:ವಸತಿಯನ್ನು ನೀಡಲಾಗಿದೆ; (ವರ್ಷಾವಾರು ವಿವವ ನೀಡುವುದು)

ಇ) ಉಳಿದ ಅರ್ಜಿದಾರರಿಗೆ ಎಷ್ಟು ಅವಧಿಯೊಳಗೆ ವಸತಿಗಳನ್ನು ನಿರ್ಮಿಸಿ ವಿತರಿಸಲಾಗುವುದು?

**ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು)**

ಅ) ಕಳೆದ 3 ವರ್ಷಗಳಿಂದ ವಸತಿ (ಮನೆಗಳ) ಹಂಚಿಕೆಗಾಗಿ ಗೃಹ ಮಂಡಳಿಗೆ ಬಂದ ಅರ್ಜಿಗಳ ವರ್ಷಾವಾರು ವಿವರ ಕೆಳಗೆ ನೀಡಲಾಗಿದೆ.

| ಕ್ರಮ ಸಂಖ್ಯೆ | ವರ್ಷ | ಸ್ವೀಕರಿಸಿದ ಅರ್ಜಿಗಳು |
|---|---|---|
| 1. | 1994-95 | 2047 |
| 2. | 1995-96 | 5019 |
| 3. | 1996-97 | 5990 |
| | ಒಟ್ಟು | 13056 |

ಆ) ಕಳೆದ 3 ವರ್ಷಗಳಲ್ಲಿ ಕರ್ನಾಟಕ ಗೃಹ ಮಂಡಳಿಗೆ ಬಂದ ಅರ್ಜಿದಾರರಿಗೆ ಕೆಳಗೆ ತೋರಿಸಿದಂತೆ ವಸತಿಯನ್ನು ಹಂಚಿಕೆ ಮಾಡಲಾಗಿದೆ.